ದಿನಪತ್ರಿಕೆ
1 ಕಾಸು
ತಿಂಗಳಿಗೆ
ವಾರಪತ್ರಿಕೆ ಸೇರಿ
4 ಆಣೆ

Regd No: M 1299 SATYAVADI

ಸತ್ಯವಾದಿ

ಸಂಪುಟ 26] ಗುರುವಾರ 28—1—1943 [ಸಂಚಿಕೆ 91

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವ ವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ಸತ್ಯವಾದಿ ಆಫೀಸ್ ಮೈಸೂರು

ಚರ್ಚಿಲ್ ರೂಸ್ವೆಲ್ಟರ ಭೇಟಿ

ವಿವಿಧ ವರ್ತಮಾನಗಳು

ಬೊಂಬಾಯಿನಲ್ಲಿ ಒಬ್ಬ ಐಶ್ವರ್ಯವಂತನ ಮಗನು ಕಾಂಗ್ರೆಸ್ಸಿನ ವಿವಿಧ ಸಂಸ್ಥೆಗಳಿಗೆ ಧನಸಹಾಯ ನೀಡುತ್ತಿರುವನೆಂಬ ಆಪಾದನೆಗಾಗಿ ಅಲ್ಲಿಯ ಸಿ.ಐ.ಡಿ. ಪೋಲೀಸಿನವರು ಆ ತರುಣನನ್ನು ಖೈದು ಮಾಡಿದರಂತೆ.

ಜಿಲ್ಲೆಯಲ್ಲಿ ನಾಣ್ಯಸಂಗ್ರಹದ ಶೋಧನೆಯನ್ನು ಪೋಲೀಸರು ಒಂದೇವೇಳೆಗೆ ಬೇರೆಬೇರೆ ಕಡೆ ಮಾಡಿದರು. 4 ಸಾವಿರ ರೂಪಾಯಿಗಳ ಚಿಲ್ಲರೆಯನ್ನು ದೊರಕಿಸಲಾಯಿತು. ಈ ಸಂಬಂಧವಾಗಿ ಸುಮಾರು 12 ಜನರು ದಸ್ತಗಿರಿ ಮಾಡಲ್ಪಟ್ಟರು. ಚಾಂದಿ ಚೌಕದಲ್ಲಿ 12 ಸಾವಿರ ರೂಪಾಯಿಯ ಬೆಳ್ಳಿನಾಣ್ಯಗಳು ದೊರೆತವು.

ಅಹಮದಾಬಾದಿನಲ್ಲಿ ಒಬ್ಬ ಹೋಟಲಿನವನು ನಿರಾಕಿಗೆ ಚಿಲ್ಲರೆಗಳನ್ನು ಕೊಡಲು ನಿರಾಕರಿಸಲು ಪೋಲೀಸಿನವರು ಅವನ ಹೋಟಲನ್ನು ಜಡ್ತಿಮಾಡಿ ನೋಡಲಾಗಿ 875 ರೂ. ಗಳ ಚಿಲ್ಲರೆ ಇದ್ದುದು ಕಂಡುಬಂದಿದ್ದರಿಂದ ಅವನನ್ನು ಖೈದು ಮಾಡಲಾಯಿತಂತೆ

ಈ ಕಲ್ಕತ್ತಾದಲ್ಲಿ ಮೂರು ಮಂದಿ ಚೀನಾದವರು ತಮ್ಮ ಚಲನವಲನದ ಒಗ್ಗೆ ಸರಿಯಾದ ವರದಿಯನ್ನು ತಿಳಿಸಲಿಲ್ಲವಾಗಿ ತಲಾ 50 ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ಫ್ರೆಂಚ್ ಪೂರ್ವಕೇದಲ್ಲಿನ ಕಾಸಬ್ಲಾಂಕಾದಲ್ಲಿ ಬ್ರಿಟಿಷ್ ಮುಖ್ಯಮಂತ್ರಿ ಚರ್ಚಿಲ್ಲರೂ, ಅಮೇರಿಕಾ ಪ್ರೆಸಿಡೆಂಟ್ ರೂಸ್ವೆಲ್ಟರೂ 10 ದಿನಗಳಿಂದ ಮಾತುಕತೆ ನಡೆಸಿ, 1943 ರಲ್ಲಿ ಶತ್ರುಗಳ ಮೇಲೆ ಮುನ್ನುಗ್ಗುವ ಕಾರ್ಯಕ್ರಮವನ್ನು ಅನುಸರಿಸಲು ತೀರ್ಮಾನಿಸಿದ್ದಾರೆ. ಶತ್ರುಗಳ ಕಾರ್ಯಾಚರಣೆಯನ್ನು ಕುಂಠಿತಗೊಳಿಸಿ ರಷ್ಯಾದಲ್ಲಿ ಶತ್ರು ಒತ್ತಾಯವನ್ನು ಕಡಮೆ ಮಾಡಬೇಕೆಂಬುಲೇ ಇವರ ಆಶಯವು. ಅದೇ ಸ್ಥಳದಲ್ಲಿ ಬನರಲ್ ಗಿರೋಡ್ ಮತ್ತು ಡಿಗಾಲರೂ ಭೇಟಿಮಾಡಿ, ಒಂದು ತೀರ್ಮಾನಕ್ಕೆ ಒಂದು. ಮಿತ್ರ ಮಂಡಲಿಯೆಲ್ಲಾ ಸಂಪೂರ್ಣವಾಗಿ ಸಹಕರಿಸಿ, ಶತ್ರುಗಳನ್ನು ಮಟ್ಟಾ ಹಾಕುವ ವಿಷಯದಲ್ಲಿ ಏಕಮನಸ್ಕರಾಗಿರುವುದನ್ನು ವ್ಯಕ್ತಪಡಿಸಿರುವರು.

ಚಿಲ್ಲರೆ ಗಲಾಟೆ

ಮನ್ನಾರ್‌ಗುಡಿ, ಕಾರೈಹಸ್ಕಿಗಳಲ್ಲಿ ರೂ 130, ಕೊಯಮತ್ತೂರಿನಲ್ಲಿ ರೂ. 2601 ಜಂಗಲ್ಪೇಟೆ ರೂ 350, ತಿರುವಾರೂರು ರೂ 16. ವೃದ್ಧಾಚಲಂ, ಮಂಗಲಂಪೆಟ್ಟೈ ಟಬ್ಬಾಕುಡ್ಡೈ ರೂ 104, ಸೇಲಂ ರೂ 470 ನಾಗಪಟ್ಟಣ ರೂ 1300. ಹೀಗೆ ಇಷ್ಟು ಮೊತ್ತದ ಚಿಲ್ಲರೆಯನ್ನು ಮೇಲ್ಕಂಡ ಸ್ಥಳಗಳಲ್ಲಿ ಹಿಡಿದಿಡು. ಹಲವರನ್ನು ಕೈದು ಮಾಡಿದ ವಾರ್ತೆಗಳು ಬಂದಿವೆ.

ಹೊಸಹೊಸ ಸುದ್ದಿ

ಜುಪಿರಾವನ್ನು ಮಿತ್ರಮಂಡಲಿಯವರು ಹಿಡಿದಿರುವರು.

ಟುನಿಷಿಯಾದಲ್ಲಿ ರೋಮಿಲ್ಲನ ಸೈನ್ಯವು ಇತರ ಆಕ್ಸಿಸ್ ಸೈನ್ಯದೊಂದಿಗೆ ಸೇರಿರೆಂದೆಂದು, ಆಕ್ಸಿಸ್ ರೇಡಿಯೋ ವರ್ತಮಾನ.

ಮಧ್ಯ ಬರ್ಮಾದ ಜಪಾನ್ ವಿಮಾನ ನಿಲ್ದಾಣಗಳ ಮೇಲೆ ಆರ್. ಎ. ಎಫ್ ಧಾಳಿ ನಡೆದಿದೆ.

ಪೂನಾದಲ್ಲಿ ಆಕ್ಷೇಪಕರವಾದ ಪ್ರಕಟಣ ಪತ್ರಗಳನ್ನು ಮುದ್ರಿಸುತ್ತಿದ್ದ ಗುಪ್ತ ಮುದ್ರಣಾಲಯವು ಪತ್ತೆಮಾಡಲಾಗಿದೆ.

ಮದ್ರಾಸು ಕುದುರೆ ಜೂಜನ್ನು ಇನ್ನೂ ಕೆಲವು ದಿವಸಗಳು ನಡೆಸಬೇಕೆಂದು ಟ್ರೇಸರುಗಳು ಮನವಿಮಾಡಿಕೊಂಡಿದಾರೆ

ಕಂಪಾಜಿಟರು ಬೇಕಾಗಿದ್ದಾರೆ

ಪ್ರತಿದಿನ ಮಧ್ಯಾಹ್ನ ಕೆಲವು ಗಂಟೆಗಳ ಕೆಲಸ ಮಾಡಲ್ಲ ಇಬ್ಬರು ಕಂಪಾಜಿಟರುಗಳು ಕೂಡಲೇ ಬೇಕಾಗಿದ್ದಾರೆ. ಮೆಚ್ಚಿ ವಿಷಯಗಳನ್ನು ಆಫೀಸಿನಲ್ಲಿ ವಿಚಾರಿಸಿ ತಿಳಿಯಬಹುದು.

ಮ್ಯಾನೇಜರ್, ಸತ್ಯವಾದಿ ಆಫೀಸ್
ಮೈಸೂರು

ಶ್ರೀ ವರದಾಚಾರ್ ಸ್ಮಾರಕ ನಿಧಿ

ಈ ನಿಧಿಗೆ ಈಗ ಹತ್ತೈದು ವರ್ಷದಿಂದ ಹಣವನ್ನು ಜಮಾಯಿಸುತ್ತಿರುವರಷ್ಟೆ. ಇದುವರೆಗೆ ವಸೂಲಾದ ಹಣವೆಷ್ಟು? ಯಾವಯಾವ ನಿಧಿಗೆ ಎಷ್ಟೆಷ್ಟು ಸಹಾಯ ಮಾಡಿರುತ್ತಾರೆ? ಬಹು ಜನರು ಕುತೂಹಲವಾಗಿರುವುದರಿಂದ ನೀವಾಗಲಿ ಇಲ್ಲವೆ ಈಗ ದ್ರವ್ಯ ವಸೂಲು ಮಾಡುತ್ತಿರುವವರಾಗಲಿ ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಜನರಲ್ಲಿ ಸಂಬಕೆ ಹುಟ್ಟಿ, ವಸೂಲಿ ಹೆಚ್ಚಿ, ಬೇಗಬೇಗನೆ ವಸೂಲಾಗುವುದರಲ್ಲಿ ಸಂದೇಹವಿಲ್ಲ.

ಆರ್. ರಾವ್.

ಕುಮಾರಿಯರ ವಿಕೀಕರಣ

ಕರಿದ ವಾರ ಟೋಕಿಯೋ ರೇಡಿಯೊದಲ್ಲಿ ಕುಮಾರಿಯರ ವಿಕೀಕರಣದ ವಿಷಯಕ್ಕೆ ಜಪಾನಿಗಿದ್ದ ಮಹತ್ವಾಕಾಂಕ್ಷೆಯನ್ನು ಹೇಳುವಾಗ "ಒಟೇವಿಯಾ ಡಚ್, ಈಸ್ಟ್ ಇಂಡೀಸ್ ಇವುಗಳನ್ನು ಮುಖ್ಯ ಕೇಂದ್ರಗಳನ್ನಾಗಿ ಮಾಡಿ 'ಗ್ರೇಟ್ ಈಸ್ಟ್ ಏಷಿಯಾ ಪಬ್ಲಿಸಿಟಿ ಬ್ಯೂರೋ' ಅನ್ನು ನಿರ್ಮಿಸುವೆವು. ಜಪಾನಿ ಕುಮಾರಿಯರು ಇದಕ್ಕೆ ಪೂರ್ಣವಾಗಿ ಸಮ್ಮತಿಸಿದ್ದಾರೆ. ಈ ಜಪಾನಿ ಕುಮಾರಿಯರೊಂದಿಗೆ ಏಸಿಲ್ಲನೆಂದರೂ 2 ಲಕ್ಷ ದಷ್ಟು ಉಳಿದ ಭಾಗದ ಕುಮಾರಿಯರು ಸಹಕರಿಸಬಹುದು. ಈ ಕುಮಾರಿಯರೊಡನೆ ಏಷ್ಯಾದಲ್ಲಿ ಹೊಸ ಬಗೆಯ ಜಗತ್ತನ್ನೇ ನಿರ್ಮಿಸಬಹುದು.

ಸೂಚನೆ

ಸೋಮವಾರದಿಂದ ಹೆಚ್ಚು ವಿಷಯಗಳನ್ನು ಪ್ರಕಟಿಸಲು ಏರ್ಪಡಿಸಿರುತ್ತೇವೆ

ವ್ಯವಸ್ಥಾಪಕರು

ಟೆಲಿಫೋನಿನಿಂದ ಅನಾನುಕೂಲವಂತೆ !

ಬಂಗಾಳ ಗವರ್ನರಾಗಿದ್ದ ಲಾರ್ಡ್ ಲಿಟ್ಟನ್ ಈಚೆಗೆ ಒಂದು ಪುಸ್ತಕದಲ್ಲಿ ಹೀಗೆ ಬರೆದಿರುವರ —ಮಾಜಿ ಜಯಪುರದ ಮಹಾರಾಜರು ತಮ್ಮ ಅರಮನೆಯಲ್ಲಿ ಟೆಲಿಫೋನ್ ಹಾಕಿಸಬೇಕೆಂದಾಗ ಹೇಳಿದ್ದು —ಟೆಲಿಫೋನ್ ಅಂದರೆ ಒಂದು ಗುಂಡಿ ಬಾಯಿಬಿಡ್ತದೆ ಆಗ ಯಾರೋ ನನ್ನ ಸಂಗಡ ಮಾತಾಡೇಕೆಂಬುವ ಸೂಚನೆಯಲ್ಲವೇ? ನಾನು ಉತ್ತರ ಕೊಡಬೇಕಲ್ಲವೆ? ನಾನು ಯಾವಾಗಲೂ ಯಾರಿಗೂ ಒಂದು ವರ್ಷಕ್ಕೆ ಕಮ್ಮಿಯಾಗಿ ಉತ್ತರ ಕೊಡುವುದಿಲ್ಲವಾದ್ದರಿಂದ ನನ್ನ ಅರಮನೆಗೆ ಟೆಲಿಫೋನ್ ಅನುಕೂಲವಿಲ್ಲವೆಂದರಂತೆ! ಇದನ್ನು ನೋಡಿದರೆ ಮೈಸೂರು ರಮಾವಿಲಾಸ ಅಗ್ರಹಾರದಲ್ಲಿರುವ ಒಬ್ಬ ಶ್ರೀಮಂತರನ್ನು ಯಾತಕ್ಕೆ ನಿಮ್ಮ ಮನೆಗೆ ಎಲಕ್ಟ್ರಿಕ್ ಲೈಟ್ ಹಾಕಿಸಲಿಲ್ಲವೆಂದು ಕೇಳಲು ಅವರು ನನ್ನ ಮನೆಯಲ್ಲಿ ಮಂಗಳ ಕಾರ್ಯ ನಡೆಯವಾಗ ಮನೆಲಾಲಗ್ನ ಕಾಲದಲ್ಲಿ ತಾಳಿ ಕಟ್ಟುವಾಗ ದೀಪ ಆರಿ ಹೋದರೆ ಮನಸ್ಸಿಗೆ ಚಿಂತೆಯಾಗುವುದಿಲ್ಲವೆ? ಅದಕ್ಕೋಸ್ಕರ ಆ ದೀಪವೇ ಬೇಡವೆಂದು ಹೇಳಿದ್ದು ಜ್ಞಾಪಕಕ್ಕೆ ಬರುತ್ತೆ

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎಮುರುನೋಡಿ

— ಹೆಚ್ ಆರ್ ಜಿ. ಸಿ. ಯವರ —

ಶ್ರೀ ಪಿಚ್ಚರ್ಸ್

ಗಾಂಧಿಸ್ಕ್ವೇರ್, ಮೈಸೂರು ಇವರ ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಎಂಬ ಕನ್ನಡ ಸಾಮಾಜಿಕ ಚಿತ್ರ.

ಭಂಗಾರ ಬೆಳ್ಳಿ ಧಾರಣೆ

ಬಂಗಾರ ತೋಲ ರೂ. 6——೦
ಬೆಳ್ಳಿ ,, 1—೮—3

=ಅಪೆರ=
ಕುನ್ವಿರ್ ಬಾಪ್

ಉತ್ತಮ ಕಾಫೀ

ಸೇವಾಸನೆ! ಅತ್ಯಂತ ರುಚಿ!

ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!

ಕೊಳ್ಳೇಗಾಲ

ಸತ್ಯವಾದಿ ವಾರಪತ್ರಿಕೆಗೆ
ಚಂದಾದಾರರಾಗಿರಿ

ಚಂದಾ ಮೈಸೂರು ಮತ್ತು ಏಜೆಂಟರ ತಕ್ಕ ಸ್ಥಳದಲ್ಲಿ ತಿಂಗಳಿಗೆ 2 ಆಣೆ
ಪರಸ್ಥಳಕ್ಕೆ ಚಂದಾ ವರ್ಷಕ್ಕೆ ಅಂಚೆಸಮೇತ ಸೇರಿ ರೂ. 1--12--0

For Invigorating Coffee & Tea
Sastry's Coffee Rooms
Chamarajapuram, Myaore

ಮಂಗಳೂರು ಗಣಪತಿ, ಸುವರ್ಣಾ ಸ್ಪೆಷಲ್, ಗಜಾನನ ಬ್ರಿಡಿಗಳನ್ನೇ ಉಪಯೋಗಿಸಿ

ಪಿ. ಮಂಜಪ್ಪ, ಬೀಡಿ ಮರ್ಚೆಂಟ್.
ಹಳೇ ಅಗ್ರಹಾರ, ಮೈಸೂರು.

HOTEL PARADISE
D. Subbiah Road, Mysore paovides you with comfortable and home'y meals

Edited, Printed & pnblished by M. S. Krishna Rao, at the Satyavadi P r e s s. Chamaraja Agrahar, Mysore.